ಪದೇ ಆಗುತ್ತದೆಯೆಂದು ಹೇಳಿದ್ದಾರೆ, ಆ ಒಂದು ಏರಿಯಾದಲ್ಲಿ ಈ ರೀತಿ ನಡೆದುಕೊಂಡು ಬಂದಿದೆ. ಮತ್ತು ಅಬ್ಬಾರಿ ಇಲಾಖೆಯವರು ಆ ಸ್ಥಳಕ್ಕೆ ಹೋದ ನಂತರ ಬಹಳಷ್ಟು ಲಾರಿಗಳಲ್ಲಿ ಸಿಕ್ಕಿದೆಯೆಂದು ಹೇಳಿದಿರಿ. ಯಾಹ್ಯಾರವರು ಹೇಳಿದಂತೆ that is the biggest slum in the Bangalore. ಇವೊತ್ತು 81 ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರತಕ್ಕಂಥ ರೀತಿಯಲ್ಲಿ ಬಹಳಷ್ಟು ಕೆಲಸ ಮಾಡತಕ್ಕಂಥವರು ಕೂಲಿಕಾರರು, ಬಡವರು ಇದ್ದಾರೆ. ಅಂತಹ ಒಂದು ಪ್ರದೇಶದಲ್ಲಿ ಪರಿಸ್ಥಿತಿಯನ್ನು ನಾವು ನಿಯಂತ್ರಣಕ್ಕೆ ತೆಗೆದುಕೊಂಡಿದ್ದೇವೆ. ನಿಯಂತ್ರಣ ತೆಗೆದುಕೊಂಡರೂ ಸಹ ಈ ರೀತಿ ಆಗುತ್ತದೆ. ನಾವು ವಾಸ್ತವಿಕವಾಗಿ ಹೇಳಬೇಕಾಗುತ್ತದೆ. ಇವೊತ್ತು ಎಲ್ಲೆಲ್ಲಿ ಇಂತಹ identified areas ಇದೆ, ಎಲ್ಲಿ ಈ ತರಹದ ಮಾರಾಟವಾಗತಕ್ಕಂಥ ಸ್ಥಳವಿದೆ, ಅಂತಹ ಸ್ಥಳಗಳ ಮೇಲೆ ನಾವು ಬಹಳ ಹತೋಟಿ ತರತಕ್ಕಂಥಾದ್ದು, ಅದಕ್ಕೊಂದು ಸ್ಟಾಡ್ ಮಾಡತಕ್ಕಂಥಾದ್ದು ಮಾಡಿ ಒಂದು ನಿಯಂತ್ರಣ ಮಾಡಿ, ಮುಂದೆ ಈ ರೀತಿ ಆಗಲಾರದ ರೀತಿಯಲ್ಲಿ atmosphere ಕ್ರಿಯೇಟ್ ಮಾಡುವುದಕ್ಕೆ ಕೂಡ ಕ್ರಮ ಕೈಗೊಳ್ಳಬೇಕಾಗಿದೆ, ಕ್ರಮ ತೆಗೆದುಕೊಳ್ಳುತ್ತೇವೆ. ಏನು ಒಂದು ಈ ಘಟನೆ ಜರುಗಿದೆ, ಇದರ ಬಗ್ಗೆ ನಾವು ಡಿವಿಜನಲ್ ಕಮೀಷನರ್ ರ್ಯಾಂಕ್‌ನಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ, ಇದರಲ್ಲಿ ಸ್ಥಳೀಯರು ಯಾರು ತಪ್ಪಿತಸ್ಥರಿದ್ದಾರೆ? ಇದು ಹೇಗಾಗಿದೆ? ಏತಕ್ಕೆ ಕ್ರಮ ಕೈಗೊಂಡಿಲ್ಲ ? ಏನೇನಾಗಿದೆ? ಎಂಬುದನ್ನೆಲ್ಲಾ ಪೂರ್ಣವಾಗಿ ಸರ್ಕಾರದ ವತಿಯಿಂದ ಪೂರ್ಣ ತನಿಖೆ ಮಾಡಿಸಿ, ಇದೇ ಸದನದಲ್ಲಿ ವರದಿ ಕೂಡ ಒಪ್ಪಿಸುತ್ತೇನೆ.

2. ಭದ್ರಾವತಿ - ಮೈಸೂರು ಕಾಗದ ಕಾರ್ಖಾನೆಯಲ್ಲಿ ತೆಗೆದುಹಾಕಿರುವ ನೌಕರರ ಪುನರ್ ನೇಮಕ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನದು ಈ ವಿಚಾರವಲ್ಲ, ಮೈಸೂರು ಪೇಪರ್ ಮಿಲ್ಸ್‌ಗೆ ಸಂಬಂಧಪಟ್ಟಿರತಕ್ಕಂಥ ವಿಚಾರ ಹೇಳುತ್ತೇನೆ. ಭದ್ರಾವತಿಯಲ್ಲಿರತಕ್ಕ ಮೈಸೂರು ಕಾಗದ ಕಾರ್ಖಾನೆಯಲ್ಲಿ 275 ಜನ ನೌಕರರು ಕಳೆದ 8 ವರ್ಷಗಳಿಂದ ಕ್ಯಾಶುಯಲ್ ಲೇಬರರ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಕ್ಯಾಶುಯಲ್ ಲೇಬರರ್‌ಗಳಿಗೆ ಸರಿಯಾದ ಸಂಬಳ ಕೊಡುತ್ತಿಲ್ಲ. ನಮಗೆ ಕೊಡತಕ್ಕಂಥ ಸಂಬಳ ಸಾಕಾಗುತ್ತಿಲ್ಲವೆಂದು, ಅವರು ಧರಣಿ ಕುಳಿತು ಮುಷ್ಕರ ಹೂಡಿದ್ದಕ್ಕೆ 272 ಜನರಲ್ಲಿ 242 ಜನ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡು, 30 ಜನ ನೌಕರರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಅವರನ್ನು ಎಂಟು ದಿವಸಗಳೊಳಗೆ ಕೆಲಸಕ್ಕೆ ತೆಗೆದುಕೊಳ್ಳದೆ ಹೋದರೆ 8 ವರ್ಷಗಳಿಂದ ಮಾಡಿರತಕ್ಕಂಥ ಕೆಲಸಕ್ಕೆ ಅವರ ಹಕ್ಕು ಹೊರಟು ಹೋಗುತ್ತದೆ. ಆದುದರಿಂದ, ಇದರ ಬಗ್ಗೆ ಸರ್ಕಾರ ಏನಾದರೂ ಒಂದು ನಿರ್ದೇಶನವಿತ್ತು, ಅವರು ಏನು ಇವೊತ್ತು ಸ್ಟ್ರೈಕ್ ಮಾಡಿದ್ದಾರೆ, ಆ ಸ್ಟ್ರೈಕ್ ಮಾಡಿರುವುದೇ ದೊಡ್ಡ ಅಪರಾಧವೆಂದು ಅವರನ್ನು ಕೆಲಸದಿಂದ ತೆಗೆದುಬಿಟ್ಟರೆ, ಅವರ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಆದುದರಿಂದ, ಸರ್ಕಾರ ಒಂದು ನಿರ್ದೇಶನ ಕೊಟ್ಟು, ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವ ರೀತಿಯಲ್ಲಿ ಒಂದು ಆದೇಶ ಮಾಡಬೇಕೆಂದು ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ :- ಈಗ 275 ಜನರಲ್ಲಿ 243 ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಕೇವಲ ಸಂಘದ ಪದಾಧಿಕಾರಿಗಳನ್ನು ಮಾತ್ರ ತೆಗೆದುಹಾಕಿದ್ದಾರೆ. ಎಲ್ಲರನ್ನೂ ತೆಗೆದುಕೊಂಡು, ಪದಾಧಿಕಾರಿಗಳನ್ನು ಮಾತ್ರ ತೆಗೆದುಹಾಕಿದ್ದಾರಲ್ಲಾ, ಇದು ಯಾವ ನಿಯಮ? ತಾವೇ ಹೇಳಿರಿ. ಒಂದು ಸಂಘವನ್ನು ರಚನೆ ಮಾಡಿಕೊಂಡು ಮುಷ್ಕರ ಹೂಡಿ ತಮ್ಮ ಹಕ್ಕಿಗಾಗಿ ಹೋರಾಟ ಮಾಡುವುದರಲ್ಲಿ ಸಂಘದ ಪದಾಧಿಕಾರಿಗಳನ್ನು ತೆಗೆದುಹಾಕಿ ಬೇರೆಯವರನ್ನು ತೆಗೆದುಕೊಂಡಿದ್ದಾರೆ. ಆದುದರಿಂದ, ದಯಮಾಡಿ 33 ಜನ ನೌಕರರನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಣೆಯರೆ, ಮಾನ್ಯ ಸದಸ್ಯರು ಭದ್ರಾವತಿ ಕಾಗದದ ಕಾರ್ಖಾನೆಯ ಬಗ್ಗೆ ಪ್ರಸ್ತಾಪವನ್ನು ಎತ್ತಿದ್ದಾರೆ ಅದನ್ನು ಮಾನ್ಯ ಸಚಿವರಿಗೆ ತಿಳಿಸಿ ಏನು ಮಾಡಬೇಕೊ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕರಿಯಣ್ಣ :- ಉಪಾಧ್ಯಕ್ಷಣೆಯವರೆ ಅವರು ಮಂತ್ರಿಗಳಿಗೆ ಹೇಳುತ್ತೇವೆ ಅವರು ಏನು ಕ್ರಮತೆಗೆದುಕೊಳ್ಳುತ್ತಾರೋ ಅದನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದರು. ಆದರೆ ನಮಗೆ ಸರ್ಕಾರದಿಂದ ಗ್ಯಾರಂಟಿಯಾದ ಉತ್ತರ ಸಿಗಲಿಲ್ಲ, ದಯಮಾಡಿ ಆ 33 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷಣೆಯವರು :- ನೀವು ಯಾವುದೋ ಒಂದನ್ನು ಎತ್ತಿದಾಕ್ಷಣ ಅವರು ಉತ್ತರವನ್ನು ಹೇಗೆ ಕೊಡುತ್ತಾರೆ ಅದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಉಪಾಧ್ಯಕ್ಷಣೆಯವರೆ ಅವರ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ ಆದರೆ ಇದರ ಬಗ್ಗೆ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು.

(ಗೊಂದಲ)

ಉಪಾಧ್ಯಕ್ಷಣೆಯವರು :- ಅವರು ಅದನ್ನು ಪರಿಶೀಲನೆ ಮಾಡುತ್ತಾರೆ.

(ಗೊಂದಲ)

ದಿ. 11.3.92 ರಂದು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬಗ್ಗೆ .

ಶ್ರೀ ಚಿಕ್ಕಮಾದು :- ಉಪಾಧ್ಯಕ್ಷಣೆಯವರೇ ನಾಳೆ ಅಂದರೆ 11.3.1992 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬೆಂಗಳೂರಿನಲ್ಲಿರತಕ್ಕ ಸುಮಾರು 40–50 ಲಕ್ಷ ಜನರಿಗೆ ಈ ರೀತಿ ನಗರ ಸಾರಿಗೆ ಸಂಸ್ಥೆಯವರು ವಾಹನಗಳನ್ನು ಸ್ಥಗಿತಗೊಳಿಸಿದರೆ ಎಷ್ಟು ಜನರಿಗೆ ತೊಂದರೆಯಾಗುತ್ತದೆ? ಅದಕ್ಕೊಸ್ಕರ ಇಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಸರ್ಕಾರ ಏನು ಕ್ರಮತೆಗೆದುಕೊಂಡಿದೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಉಪಾಧ್ಯಕ್ಷರೇ, ಈ ವಿಚಾರವು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ಬಂದಿದೆ, ಈಗಾಗಲೇ ಅವರು ಒಂದು ಹೇಳಿಕೆಯನ್ನು ಕೂಡ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದು ಸಾರಿಗೆ ಸಚಿವರ ಗಮನಕ್ಕೆ ಬಂದಿರುವುದರಿಂದ ಈ ಬಗ್ಗೆ ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಾರೆ.

ದಿ. 07.03.92 ರುದು ಸುಳ್ಯ ಶಾಸಕರಾದ ಶ್ರೀ ಕೆ. ಕುಶಾಲ ಅವರ ಮೇಲೆ ಮಾಡಿರುವ ಹಲ್ಲೆ.

ಶ್ರೀ ವಿ. ವಸಂತ ಸಾಲಿಯಾನ :- (ಕಾಪು) ಉಪಾಧ್ಯಕ್ಷಣೆಯರೆ, 7.3.92 ರಂದು ಸೂಳ್ಯ ತಾಲ್ಲೂಕಿನಲ್ಲಿ ಸೂಳ್ಯದ ಎಂ.ಎಲ್.ಎ.ರವರಾದ ಸನ್ಮಾನ್ಯ ಕುಶಾಲರವರು ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಸುಮಾರು 20–25 ಗೂಂಡಾಗಳು ಬಿ.ಜೆ.ಪಿ. ಕಾರ್ಯಕರ್ತರು ಬಂದು ಅವರ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.